*ಅ) ಕರ್ನಾಟಕ ರಾಜ್ಯಪತ್ರದ ಸಂಖ್ಯೆ : ಡಿಪಿಎಆರ್-48-ಎಸ್ಆರ್ಇ-96 ದಿನಾಂಕ : 22-1-97ರ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ನಿಗದಿತ ಕಾಲಮಿತಿಯಲ್ಲಿ ಖಾಯಂ ಆದೇಶ ನೀಡಲು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ ಯಾವಾಗ ಆದೇಶ ನೀಡಲಾಗುವುದು?*

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) 1) ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ -48-ಎಸ್ಆರ್ ಇ - 96 ದಿನಾಂಕ : 22-1-97 ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಸ್ನಾತಕೋತ್ತರ ಪದವಿಯಲ್ಲಿ ಶೇಕಡ 55 ಅಂಕಗಳನ್ನು ಪಡೆದ ಅರೆಕಾಲಿಕ ಉಪನ್ಯಾಸಕರನ್ನು ಸದರಿ ನಿಯಮದಡಿಯಲ್ಲಿನ ಷರತ್ತಿಗೊಳಪಟ್ಟು ಸೇವಾ ವಿಲೀನಗೊಳಿಸಲು ನಿಯಮಗಳನ್ನು ರಚಿಸಲಾಗಿದೆ. ಈಗಾಗಲೇ ಸ್ಕ್ರೀಸಿದಗ್ ಸಮಿತಿ ರಚಿಸಲಾಗಿದ್ದು ಪ್ರಕ್ರಿಯೆ ಪ್ರಾರಂಭವಾಗಿದೆ.

2) ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್-64-ಎಸ್ಆರ್ಇ-96 ದಿನಾಂಕ : 29-03-97 ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಶೇಕಡ 50 ಅಂಕಗಳನ್ನು ಪಡೆದ ಅರೆಕಾಲಿಕ ಉಪನ್ಯಾಸಕರನ್ನು ಸೇವಾ ವಿಲೀನಗೊಳಿಸಲು ಕರಡು ನಿಯಮಾವಳಿಗಳನ್ನು ರಚಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಸ್ವೀಕೃತವಾದ ಆಕ್ಷೇಪಣೆಗಳು ಪರಿಶೀಲನೆಯಲ್ಲಿದೆ. ಅಂತಿಮ ನಿಯಮಾವಳಿಗಳನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು.

ಆ) ಖಾಲಿ ಹುದ್ದೆ ಲಭ್ಯವಾದಂತೆಲ್ಲ ಖಾಯಂ ಆದೇಶ ನೀಡಲಾಗುವುದು. ಈ ಬಗ್ಗೆ ಕಾಲಮಿತಿ ಇರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

## ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

2140 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*1. ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆ ಎಷ್ಟು?*

*2. ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?*

ಡಾ || ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಎರಡು.

ಆ) ಸ್ನಾತಕೋತ್ತರ ವ್ಯಾಸಂಗ ಮುಗಿಸಿ ನೇಮಕಾತಿ ನಿರೀಕ್ಷೆಯಲ್ಲಿರುವ ವೈದ್ಯರನ್ನು ನೇಮಕಾತಿ ಮಾಡುವಾಗ ಭರ್ತಿ ಮಾಡಲಾಗುವುದು.